ತಪ್ಪು, ತಾನು ಅಪದ್ಧವನ್ನೇ ಯೋಚಿಸುತ್ತಿದ್ದೇನೆ ಎನ್ನುವುದು ಗೊತ್ತಿಲ್ಲದಷ್ಟು ದಡ್ಡಿಯಲ್ಲ ಸಂಧ್ಯಾ. ಆದರೆ ಕಡುಮೋಹ ಇರುವ ಕಡೆ ಮೊದಲಿಗೆ ಬರುವುದೇ ಸಲ್ಲದ ಯೋಚನೆಗಳು. 'ಅತೀ ಆಡ್ತಿ ನೀನು' ದೂರಿದ್ದಾಳೆ ಮಗಳು, ಇವಳ ಆತಂಕದ ಪರಿ ನೋಡಿ.

'ನಿಂಗೊತ್ತಾಗಲ್ಲ ಕಣೇ, ಸ್ನಾನಕ್ಕೋ, ಮತ್ತೊಂದಕ್ಕೋ ಹೋಗದೆ ಇರೋಕಾಗುತ್ತಾ? ಮನೆಯಲ್ಲಿರೋದಕ್ಕೆಲ್ಲಾ ಬೀಗ ಹಾಕಿ ಭದ್ರ ಮಾಡಿಡೋಕಾಗುತ್ತಾ? ಮಗು ಮಲಗಿದೆ ಅಂತ ಕಣ್ಣು ಮುಚ್ಚಿ ನಿಶ್ಚಿಂತೆಯಿಂದ ಸಣ್ಣ ನಿದ್ದೆ ತೆಗೆಯೋಕಾಗುತ್ತಾ? ನಿನ್ನಪ್ಪ ಮನೆಯಲ್ಲಿ ಇರೋ ಹಾಗಿದ್ರೆ ಅದರ ಕಥೆ ಬೇರೆ ಇರ್ತಿತ್ತು. ಕಂಡು ಕೇಳದವರು ಯಾರೋ ಜೊತೆಗಿರ್ತಾರೆ ಅಂದ್ರೆ ನನಗಂತೂ ಹಿತ ಆಗಲ್ಲ. ಬದಲು ಕಷ್ಟಾನೇ ಆಗುತ್ತೆ ನಂಗೆ...'

'ಇನ್ನೊಂದು ಮರೆತುಬಿಟ್ಟೆ ಅಮ್ಮಾ, ಅದನ್ನೂ ಸೇರಿಸ್ಕೋಬೇಕಿತ್ತು'.

'ಏನೇ ಅದು?'

'ಬೇರೆ ಯಾರೋ ಮನೇಲಿದ್ರೆ ಹಿಡಿದದ್ದು ಮುಟ್ಟಿದ್ದಕ್ಕೆಲ್ಲಾ ಅಪ್ಪನ ಜೊತೆ ಜಗಳ ಆಡೋಕಾಗಲ್ಲ. ಹೌದಾ, ಅಲ್ವಾ?'

'ನನ್ನ ಮೇಲೇ ಗೂಬೆ ಕೂರಿಸಿಬಿಡು. ನಾನ್ಯಾಕೆ ಕಾಲು ಕೆರ್ಕೊಂಡು ಜಗಳ ಆಡ್ತೀನಿ? ಅಂತಾ ಸಂದರ್ಭ ಬಂದ್ರೆ ಮಾತ್ರ'

'ಸಂದರ್ಭಕ್ಕೇನು, ಬರ್ತಾನೇ ಇರುತ್ತೆ. ಹುಳುಕು ಹುಡುಕೋದ್ರಲ್ಲಿ ಎಕ್ಸ್‌ಪರ್ಟ್ ನೀನು...'

'ನಿನ್ನಪ್ಪನ ಎದುರು ಈ ಮಾತು ಹೇಳು, ತಲೆಮೇಲೆ ಕೊಂಬು ಬಂದುಬಿಡುತ್ತೆ. ಬರೀ ಜಗಳ ಆಡೋಕೆ ಮಾತ್ರ ಅಲ್ಲ ಕಣೇ, ಮನೇಲಿ ಮತ್ತೊಬ್ಬರಿದ್ರೆ ಮನಸ್ಸು ಬಿಚ್ಚಿ ಯಾವ ಮಾತೂ ಆಡೋಕಾಗಲ್ಲ. ಸಂಸಾರ ಅಂದ್ಮೇಲೆ ಒಬ್ಬಿಗೊಬ್ರು ಹೇಳ್ಕೊಳ್ಳೋ ಗುಟ್ಟು ಬೇಕಾದಷ್ಟಿರುತ್ತೆ'.

'ಗುಟ್ಟು ಅಂದ್ರೇನು? ಇನ್ಯಾರೋ ಮೂರನೆಯವರ ವಿಷಯ...'

'ಹಾಗೇ ಅಂದ್ಕೋ...'

'ನೀನಂತೂ ಬಿಡು, ಮರದ ಬಾಯಾಗಿದ್ರೆ ಒಡೆದು ಹೋಗ್ತಿತ್ತು ಅನ್ನೋಷ್ಟು ಮಾತಾಡ್ತಾ ಇರ್ತಿ. ಪಾಪ ಅಪ್ಪ'

'ಅನ್ಯಾಯ ಕಣೇ. ಸೇವೆ ಮಾಡೋಕೆ ನಾನು. ಹೊಗಳಿ ಅಟ್ಟಕ್ಕೇರಿಸಿ ಕೂರಿಸೋಕೆ ಅಪ್ಪ'.

ಹೀಗೆಂದರೂ ಮಗಳು ತನ್ನಪ್ಪನ ಮೇಲಿಟ್ಟಿರುವ ಪ್ರೀತಿ ನೋಡಿ ಮೈಯಲ್ಲಿ ಒಂದು ಮುಷ್ಟಿ ಮಾಂಸ ಹೆಚ್ಚಾದಂತೆ ಬೀಗಿತ್ತು ಹೃದಯ. ಮಗಳು ತನ್ನನ್ನು ಕೀಟಲೆ ಮಾಡುತ್ತಿದ್ದಾಳೆ ಎಂದೂ ಗೊತ್ತಾಗಿತ್ತು. ತನ್ನ ಮೇಲೆ ಅವಳ ಪ್ರೀತಿ ಕಡಿಮೆಯೇನಲ್ಲ. ಮಗಳು ಮಾತ್ರವಾ, ಅವಳು ತನ್ನ ಅಂತರಂಗದ ಗೆಳತಿ ಕೂಡಾ

***

ತೌರಿನಲ್ಲಿ ಮೂರು ತಿಂಗಳ ಬಾಣಂತನ ಮುಗಿಸಿಕೊಂಡು ಗಂಡನ ಮನೆಗೆ ಹೊರಟು ನಿಂತ ಮಗಳೊಡನೆ ತಾನೂ ಜೊತೆಗೆ ಹೊರಡಬೇಕಾಯ್ತು ಸಂಧ್ಯಾ. ಮಗನನ್ನು ಅಮ್ಮನ ಮಡಿಲಿಗೆ ಹಾಕಿ ತನ್ನ ಕರ್ತವ್ಯಕ್ಕೆ ಹಾಜರಾಗಬೇಕಿತ್ತು ಮಗಳು. 'ಬೇಡ'ವೆಂದು ಕೊಡವಿಕೊಳ್ಳುವಂಥ ಕೆಲಸ ಅಲ್ಲ. ಕೈತುಂಬಾ ಸಂಬಳ ಬರುವ ಉದ್ಯೋಗ. ನಾಳೆ ಪ್ರಮೋಷನ್ ಆದರೆ ಇನ್ನಷ್ಟು ಮತ್ತಷ್ಟು ಅನುಕೂಲತೆಗಳು. 'ಕೆಲಸ ಬಿಟ್ಟುಬಿಡ್ಲಾ?' ಎನ್ನುವಷ್ಟು ಮಗಳು ತಲೆ ಕೆಡಿಸಿಕೊಂಡಿದ್ದಿತ್ತು.

'ಪುಣ್ಯಾತ್ಗಿತ್ತಿ, ಹಾಗೆಲ್ಲಾದ್ರೂ ಮಾಡ್ಬಿಟ್ಟೇಡ ಕಣೇ. ನಾಲ್ಕಾರು ವರ್ಷ ಹೇಗೋ ಸುಧಾರಿಸಿದ್ರೆ ಆಮೇಲೆ ಕಷ್ಟ ಆಗಲ್ಲ'.

'ಸುಧಾರಿಸ್ಬೇಕಲ್ಲ ನಾಲ್ಕಾರು ವರ್ಷ?'

'ನಾನಿದೀನಲ್ಲ' ಅಂದಿದ್ದಳು ಸಂಧ್ಯಾ ಉಗುಳು ನುಂಗಿಕೊಳ್ಳುತ್ತಾ. ಏನೇ ಕಷ್ಟ ಬರಲಿ, ಹೆಣ್ಣುಮಕ್ಕಳಿಗೆ ತೌರಿನ ಬಲವೇ ಬಲ ಎಂದು ಒಂದಲ್ಪ ಅಭಿಮಾನ. 'ಬಿಟ್ಟು ಹಾಕಬಾರ್ದು ನಾವು. ನಾವೇ ಕೈ ಬಿಟ್ಟರೆ ಮತ್ಯಾರು?' ಎನ್ನುವ ವಾಂಛಲ್ಯ ಮತ್ತೊಂದು ಕಡೆ. ಅತ್ತೆ ಇದ್ದಾರೆ ಮಗಳಿಗೆ. ಹಳ್ಳಿ ಊರಲ್ಲಿ ಹಿರಿಮಗನ ಜೊತೆ ತಣ್ಣಗಿದ್ದಾರೆ. ಮಾವ ಇಲ್ಲ. ಅತ್ತೆಗೆ ಮೊದಲಿಂದ ಹಳ್ಳಿಯಲ್ಲೇ ಇದ್ದಿದ್ದು ಅದೇ ರೂಢಿ. ನಾಲ್ಕು ದಿನ ಕಿರಿಮಗನ ಮನೆಗೆ ಬಂದರೆ ದಿನ ಲೆಕ್ಕ ಹಾಕುವಂತಾಗುತ್ತದೆ. ಮಡಿಮೈಲಿಗೆಯ ಹಂಗಿಲ್ಲದ ಇಲ್ಲಿನ ರೀತಿನೀತಿ, ಅಡುಗೆ ಮಾಡುವ ಕ್ರಮ, ಯಾವುದೂ ಅವರಿಗೆ ಹೊಂದಿಕೆಯಾಗುವುದಿಲ್ಲ. ಬೆಳಗಿಂದ ರಾತ್ರಿ ಮಲಗುವವರೆಗೆ ಮುಂಬಾಗಿಲು ತೆಗೆದಿಟ್ಟುಕೊಂಡು ವ್ಯವಹರಿಸುವುದು ಅಭ್ಯಾಸವಾದವರಿಗೆ ಮೂರು ಹೊತ್ತೂ ಮನೆ ಬಾಗಿಲು ಮುಚ್ಚಿಟ್ಟಿರಬೇಕು ಎನ್ನುವ ಉಪದೇಶ ಉಸಿರು ಕಟ್ಟಿಸುತ್ತದೆ. 'ನಂಬೋಕಾಗಲ್ಲ ಅಮ್ಮಾ, ಯಾರು ಬೆಲ್ ಮಾಡಿದ್ರೂ ಥಟ್ಟಂತ ಬಾಗಿಲು ತೆಗೆದುಬಿಡ್ತಾರೆ. ಒಂದಿನ ಯಾರಾದ್ರೂ ತಲೆ ಒಡೆದು ಮನೇಲಿದ್ದಿದ್ದನ್ನೆಲ್ಲಾ ದೋಚಿದ್ರೂ ಆಶ್ಚರ್ಯ ಇಲ್ಲ' ಅಮ್ಮನೊಡನೆ ಆತಂಕ ಹಂಚಿಕೊಂಡಿದ್ದಳು ಮಗಳು.

'ನಿಮ್ಮನೇಲಿ ಅವರಿಗೆಲ್ಲಿ ಕಾಲು ನಿಲ್ಲುತ್ತೆ? ಸ್ವಲ್ಪ ದಿನ ಸುಧಾರಿಸ್ಕೊಂಡ್ರಾಯ್ತಪ್ಪಾ...'

'ನಿಂಗೇನಂತೆ, ಹೇಳೋಕೆ ಸುಲಭ...' ಅಂದಿದ್ದಳು ಮಗಳು. ಇಂಥ ಸ್ವಭಾವದವರನ್ನು ಮಗು ನೋಡಿಕೊಳ್ಳಲು ಮನೆಯಲ್ಲಿರಿ ಎಂದು ಕರೆದುಕೊಂಡು ಬರುವುದೂ ಒಂದೇ, ಮೈಮೇಲೆ ಇರುವೆ ಬಿಟ್ಟುಕೊಳ್ಳುವುದೂ ಒಂದೇ ಎನ್ನುವ ಮಗಳ ಅಭಿಪ್ರಾಯಕ್ಕೆ ಸಂಧ್ಯಾಳ ಅನುಮೋದನೆ ಇದೆ. ಅತ್ತೆ ಕೈಗೆ ಮಗುವಿನ ಹೊಣೆಗಾರಿಕೆ ವಹಿಸಲು ಮಗಳಿಗೆ ಇಷ್ಟವಿಲ್ಲ ಎಂದು ಗೊತ್ತಾಗುತ್ತಿದ್ದಂತೆ ಸಂಧ್ಯಾಳ ಅಂತರಂಗದಲ್ಲಿ ವ್ಯಕ್ತಪಡಿಸಲಾಗದ ಸಮಾಧಾನದ ಸೆಳಕೊಂದು ಹಾದು ಹೋಯ್ತೇ? ಇಲ್ಲ ಅಂದರೆ ತಪ್ಪಾಗುತ್ತದೆ. ಮಗಳು ತಮ್ಮನ್ನು ನಂಬಿಕೊಂಡಿದ್ದಾಳೆ, ನೆಚ್ಚಿಕೊಂಡಿದ್ದಾಳೆ ಎನ್ನುವ ಭಾವನೆಯೇ ಒಂದು ಥರದ ಹಿತ. ಪ್ರಿಯವಾದದ್ದು ಕೂಡಾ. ಮಗುವಿನ ಲಾಲನೆ ಪಾಲನೆಗೆ ಕೆಲಸದವಳನ್ನಿಟ್ಟುಕೊಳ್ಳುವುದು ಸಂಧ್ಯಾಳ ನಿರಾಕರಣೆಯಿಂದ ಹಾಗೂ ಮಗಳ ಅರೆಮನಸ್ಸಿನಿಂದ ಕಾರ್ಯರೂಪಕ್ಕೆ ಬರದೆ ಮನೆಯ, ಮೊಮ್ಮಗನ ಹೊಣೆ ಸಂಧ್ಯಾ ಹೆಗಲಿಗೆ ಬಿದ್ದಿತ್ತು.

ಅಲ್ಲಿ, ಮನೆಯಲ್ಲಿ ಗಂಡ ಒಬ್ಬರೇ. ಸ್ಟೌವ್ ಹೊತ್ತಿಸಿ ಗೊತ್ತಿಲ್ಲದ ಪ್ರಾಣಿ. ಕೈ, ಬಾಯಿ ಸುಟ್ಟುಕೊಂಡು ಸ್ವಯಂಪಾಕ ಮಾಡಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಎಲ್ಲೆಂದರಲ್ಲಿ, ಏನೆಂದರೆ ಅದನ್ನು ತಿಂದು ಜೀರ್ಣಿಸಿಕೊಳ್ಳುವ ವಯಸ್ಸು ಅವರದ್ದಲ್ಲ. ಮಗಳ ಮನೆಯಲ್ಲಿ ಯಾವುದಕ್ಕೂ ಕೊರತೆಯಿಲ್ಲದಿದ್ದರೂ ತನ್ನ ಮನೆ, ತನ್ನ ಗಂಡ, ತನ್ನ ಸಂಸಾರ ಎಂದು ಮನಸ್ಸು ಆ ದಿಕ್ಕಿಗೆ ಎಳೆಯುತ್ತಿತ್ತು. ದಿನಾ ಒಂದಿಲ್ಲೊಂದು ನೆಪದಲ್ಲಿ ಈ ಕುರಿತು ಮಗಳೊಡನೆ ಹಂಚಿಕೊಳ್ಳುವುದು ದಿನಚರಿಯ ಒಂದು ಭಾಗವಾಗಿತ್ತು.

'ಮನೆಗೆ ಹೋದ್ಮೇಲೆ ಉಂಟು ನಂಗೆ ಹಬ್ಬ. ರಂಪ ಮಾಡಿಟ್ಟಿರ್ತಾರೆ, ಗೊತ್ತು ನಂಗೆ...'

'ಕೆಲಸದೋಳು ಬರ್ತಾಳಲ್ಲೇ...'

'ಹೊರಹೊರಗಿನ ಕೆಲಸ ಆಯ್ತು ಅನ್ನಿಸಿ ಹೋಗ್ತಾಳೆ. ಅಡುಗೆ ಮನೆ ಗತಿ ಹೇಳು...'

'ಅಯ್ಯೋ, ಅದೇನು ಮಹಾ? ನಾಲ್ಕು ದಿನಕ್ಕೆ ಸರಿ ಮಾಡ್ಕೋಬಹುದಪ್ಪಾ'.

ಮಗಳ ಮಟ್ಟಿಗೆ ಇಂತವೆಲ್ಲಾ ಚಿಲ್ಲರೆ ವಿಷಯಗಳು. ಅಸಲಿಗೆ ಅಡುಗೆಮನೆ ಕೆಲಸ ಅಂದರೆ ಅವಳಿಗೆ ಅಲರ್ಜಿ. 'ಅಡುಗೆಮನೆ ಅಂದ್ರೆ ಉಸಿರು ಕಟ್ಟುತ್ತೆ ನಂಗೆ' ಅನ್ನುವವಳು ಕೆಲಸ ಬಿಡುವ ಮಾತಾಡಿದ್ದು ಆ ಸಂದರ್ಭದ ಕನವರಿಕೆ, ಅರ್ಥವಾಗಿದೆ ಸಂಧ್ಯಾಳಿಗೆ.

ದಿನಗಳು ಕಳೆದಂತೆ ತನ್ನ ಮನೆಯ ಗೀಳು ಅಧಿಕವಾಗುತ್ತಾ ಬಂತು ಸಂಧ್ಯಾಳಿಗೆ. 'ಏನೇ, ಅಲ್ಲೇ ಬೇರು ಬಿಟ್ಟಿದೀಯಾ?' ಎಂದು ಫೋನಿನಲ್ಲಿ ಗಂಡ ಹಗುರವಾಗಿ ವಿಚಾರಿಸಿಕೊಂಡರೂ ಎಂಥದೋ ಎದೆಗುದಿ.

'ಅಡುಗೆ, ತಿಂಡಿ ಅಂತ ಕಷ್ಟ ಆಗುತ್ತೇನ್ರೀ?'

'ಕಷ್ಟ ಎಂತದು? ಒಂದಿನ ಮಾಡಿದ್ರೆ ಮೂರು ದಿನ ಫ್ರಿಜ್ಜಲ್ಲಿಟ್ಕೊಂಡು'

'ಅಯ್ಯೋ, ತಂಗಳು ತಿಂದು ಆರೋಗ್ಯ ಕೆಡಿಸ್ಕೋಬೇಡ್ರೀ...'

'ತಂಗಳು ಯಾರೇ ತಿಂತಾರೆ? ಬಿಸಿ ಮಾಡಿಕೊಂಡೇ ತಿನ್ನೋದು'.

ಇಂಥ ಮಾತುಕತೆಗಳೂ ಕೂಡಾ ಮನಸ್ಸನ್ನು ಗೀರುತ್ತಿದ್ದುವೇ? ತಾನಿಲ್ಲದಿದ್ದರೆ ತನ್ನ ಮನೆಯಲ್ಲಿ ಒಂದು ಹುಲ್ಲುಕಡ್ಡಿಯೂ ಅಲುಗಾಡಲಾರದು ಎನ್ನುವ ನಂಬಿಕೆಗೆ ಧಕ್ಕೆ? ಯಾರಿಲ್ಲದಿದ್ದರೂ ನಡೆದುಕೊಂಡು ಹೋಗುತ್ತದೆ ಬದುಕು. ಮೊದಮೊದಲು ಸ್ವಲ್ಪ ಕಷ್ಟ ಆಗಬಹುದು. ಆಮೇಲೆ ಅಭ್ಯಾಸವಾಗಿಬಿಡುತ್ತದೆ. ಗಂಡನಿಗೆ ತನ್ನ ಮೇಲಿರುವ ಅವಲಂಬನೆ ಕೂಡಾ ಹೆಂಡತಿಯ ಹೆಮ್ಮೆಯನ್ನು ಪೋಷಿಸುವ ಒಂದು ಜೀವದ್ರವ್ಯವಾಗಿರಬಹುದೇ ಅನಿಸಿ ಕಿರಿಕಿರಿಯಾಗುತ್ತಿತ್ತು. ಇರಬಹುದು ತನ್ನಂಥವರೂ. 'ತನ್ನಿಂದಲೇ ಎಲ್ಲಾ...' ಎಂದು ಮೂಗು ಮೇಲೆ ಮಾಡಿಕೊಂಡು ನಡೆಯುವವರು. ತನ್ನ ಅಗತ್ಯ ಅನಿವಾರ್ಯವೇನಲ್ಲ ಎನ್ನುವ ಸತ್ಯ ಗೊತ್ತಾದಾಗ ಚಡಪಡಿಸುವಂಥವರು.

ಮೊಮ್ಮಗನಿಗೆ ಒಂಬತ್ತು ತಿಂಗಳು ತುಂಬಿತು.